# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ,ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನೊಂದಾಯಿತ ವಿಳಾಸ:ನಂ,29,ವಿಜಯನಗರ 2ನೆ ಹಂತ , ಹಿನಕಲ್ ಮೈಸೂರು-570017

ದೂರವಾಣಿ/ಫ್ಯಾಕ್ಸ್ ಸಂಖ್ಯೆ :08223-274228
ಮೊಬೈಲ್ ಸಂಖ್ಯೆ :9448994818
ಇ ಮೇಲ್ ಸಂಖ್ಯೆ :cescppt@rediffmail..com

ಕಛೇರಿಯ ವಿಳಾಸ
ಸಹಾಯಕಕಾರ್ಯ ನಿರ್ವಾಹಕಇಂಜಿನಿಯರ್(ವಿ).,
ಕಾ ಮತ್ತು ಪಾ. ಉಪ ವಿಭಾಗ
ಚಾ.ವಿ.ಸ.ನಿ.ನಿ., ಪಿರಿಯಾಪಟ್ಟಣ-571107


ಕ್ರಮಾಂಕ:ಸ.ಕಾ.ನಿ.ಇಂ(ವಿ)/ಸಲೆಅ/ಸೆಸ್ಕ/ಪಿ.ಪಟ್ಟಣ/2019-20 ದಿನಾಂಕ:

ದಿನಾಂಕ 19.12.2019 ರಂದು ಮಧ್ಯಾಹ್ನ 11:00 ಗಂಟೆಗೆ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ .ವಿಭಾಗ ಚಾ.ವಿ.ಸ.ನಿ.ನಿ ಕೆ.ಆರ್ ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಪಿರಿಯಾಪಟ್ಟಣ ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಶ್ರೀ ಬಿ.ಎಸ್ ಚಂದ್ರಶೇಖರ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ).ಕಾರ್ಯ ಮತ್ತು ಪಾಲನಾ ವಿಭಾಗ ಚಾವಿಸನಿನಿ.ಕೆ.ಆರ್ ನಗರ.
2. ಶ್ರೀ ಕಲೀಮ್ ಅಹಮದ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
3. ಅಕ್ಷತಾ ಬಿ. ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
4. ಶ್ರೀ ಶ್ರೀನಿವಾಸ್ ಹಿರಿಯ ಸಹಾಯಕ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
5. ಶ್ರೀ ಮಹದೇವಯ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಚಿಟ್ಟೇನಹಳ್ಳಿ.
6. ಶ್ರೀ ಆಶಾ.ಪಿ ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಬೈಲಕೊಪ್ಪ.
7. ಶ್ರೀ ಜಿಗಳಿ ಭೀಮೇಶ್ , ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಕಂಪಲಾಪುರ.

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ಕಛೇರಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ ಮೈಸೂರು ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದಂತೆ ಪ್ರತಿ ೩ ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಹಾಯಿಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಪಿರಿಯಾಪಟ್ಟಣ ಉಪ ವಿಭಾಗ ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ, ಗ್ರಾಹಕರು ಹಾಜರಾಗಿ ದಾಖಲಿಸಿದ್ದ ದೂರುಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನು ವಿವರಿಸಿ ಈ ಸಭೆಯಲ್ಲಿ ದಾಖಲಾಗುವ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.

ಪು.ತಿ.ನೊ

Scanned by CamScanner

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀ ರಾಜೇಗೌಡ ಬೆಮ್ಮತ್ತಿ ಗ್ರಾಮ | ಬೆಮ್ಮತ್ತಿ ಗ್ರಾಮದಲ್ಲಿ ಸುಟ್ಟುಹೋಗಿರುವ ಪರಿವರ್ತಕವನ್ನು ಬದಲಾಯಿಸಲು ಕೋರಿ. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ, ವಿಫಲಗೊಂಡಿರುವ ಪರಿವರ್ತಕವನ್ನು ಕೂಡಲೇ ಬದಲಾಯಿಸಲು ಬೈಲಕೊಪ್ಪ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 2. | ಶ್ರೀ ಬೋರೇಗೌಡ ಬೆಣಗಾಲು ಗ್ರಾಮ | ಬೆಣಗಾಲು ಗ್ರಾಮದಲ್ಲಿ ತುಂಡಾಗಿರುವ ಎಲ್.ಟಿ ಲೈನ್ ಅನ್ನು ಸರಿಪಡಿಸಲು ಕೋರಿದರು. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ, ಕೂಡಲೆ ತುಂಡಾಗಿರುವ ಎಲ್.ಟಿ ಲೈನ್ ಸರಿಪಡಿಸಲು ಶಾಖಾಧಿಕಾರಿ ಬೈಲಕೊಪ್ಪ ಶಾಖೆ ರವರಿಗೆ ಸೂಚಿಸಿದರು. |
| 3. | ಶ್ರೀ ಶಿವಣ್ಣ ಹುಣಸೇಕುಪ್ಪೆ ಗ್ರಾಮ | ಹುಣಸೇಕುಪ್ಪೆ ಗ್ರಾಮದಲ್ಲಿ ಸುಟ್ಟುಹೋಗಿರುವ ಪರಿವರ್ತಕವನ್ನು ಬದಲಾಯಿಸಲು ಕೋರಿ. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ, ವಿಫಲಗೊಂಡಿರುವ ಪರಿವರ್ತಕವನ್ನು ಕೂಡಲೇ ಬದಲಾಯಿಸಲು ಚಿಟ್ಟೇನಹಳ್ಳಿ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 4 | ಶ್ರೀ ಸುರೇಶ್ ಚಿಟ್ಟೇನಹಳ್ಳಿ ಗ್ರಾಮ | ಕಂಬವನ್ನು ಸ್ಥಳಾಂತರಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಚಿಟ್ಟೇನಹಳ್ಳಿ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 5. | ಶ್ರೀ ಮನೋಹರ್ ಸತ್ಯಗಾಲ ಗ್ರಾಮ | ಜೋತು ಬಿದ್ದಿರುವ ತಂತಿಯನ್ನು ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಕಂಪಲಾಪುರ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 6 | ಶ್ರೀ ರವಿ ಬೋರೆಹೊಸಳ್ಳಿ ಗ್ರಾಮ | ಕಬ್ಬಿಣದ ಕಂಬವನ್ನು ಬದಲಾಯಿಸಲು ಕೋರಿದರು. | ಈ ಬಗ್ಗೆ ಕೂಡಲೆ ಸ್ಥಳ ಪರಿಶೀಲಿಸಿ ಕಂಬವನ್ನು ಬದಲಾಯಿಸಲು ಸೂಚಿಸಿದರು. |
| 7 | ಶ್ರೀ ಸುನೀಲ್ ಅಬ್ಬೂರು ಗ್ರಾಮ | ಜೋತುಬಿದ್ದಿರುವ ತಂತಿಯನ್ನು ಸರಿಪಡಿಸಲು ಕೋರಿದರು. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ನಗರ ಶಾಖಾಧಿಕಾರಿಗಳಿಗೆ ಸೂಚಿಸಿದರು. |

ಪು.ತಿ.ನೊ

Scanned by CamScanner

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ-15

ಮೌಖಿಕ ದೂರುಗಳ ಸಂಖ್ಯೆ-7

ಪತ್ರ ಲಿಖಿತ ದೂರುಗಳ ಸಂಖ್ಯೆ- 4

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಪಿರಿಯಾಪಟ್ಟಣ

ಪ್ರತಿಗಳು:-

1. ಮಾನ್ಯ ಅಧೀಕ್ಷಕಇಂಜನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ), ನೋಡಲ್ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹೂಟಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.

ಮು.ತಿ.ನೋ

Scanned by CamScanner